::ಬೆಂಗಳೂರು ನಗರ ಜಿಲ್ಲಾ ಪಂಚಾಯತ್::

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ನಗರ ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂ-2

ನಮೂನೆ-3

(1999ರ ಮಾನ್ಯತೆ ನಿಯಮ 4 ರಂತೆ)

ದಿನಾಂಕ : 25/08/2015

ಸಂಖ್ಯೆ:ಅನುರಿ/ಮಾನ್ಯತೆ/59/2015-16

ಜಿ.ಎಸ್.ಬಿ ಚಾರಿಟೆಬಲ್ ಟ್ರಸ್ಟ್, ಕೇರಾಫ್ ಶ್ರೀ ಅನಂದನಗರ ವಿದ್ಯಾನಿಕೇತನ, ಶ್ರೀ ಅನಂತನಗರ ಮುಖ್ಯ ರಸ್ತೆ, ಕಮ್ಮಸಂದ್ರ, ಆನೇಕಲ್ ತಾ., ಬೆಂಗಳೂರು ದಕ್ಷಿಣ ಜಿಲ್ಲೆ, ಈ ಆಡಳಿತ ಮಂಡಳಿಯ ವತಿಯಿಂದ ನಡೆಸುತ್ತಿರುವ, ಶ್ರೀ ಅನಂತನಗರ ವಿದ್ಯಾನಿಕೇತನ ಪ್ರೌಢಶಾಲೆ, ಕಮ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು -560100, ಈ ಪ್ರೌಢಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1-1995) ಸೆಕ್ಷನ್ 36(6) ರಂತೆ ಈ ದಿನಾಂಕ : 25/08/2015 ರಂದು ಈ ಕೆಳಕಂಡ ಷರತ್ತುಗಳ ಮೇಲೆ ಶಾಶ್ವತ ಅನುದಾನರಹಿತವಾಗಿ ಆಂಗ್ಲ ಮಾಧ್ಯಮಕ್ಕೆ ಮಾನ್ಯತೆಯನ್ನು ನೀಡಿದೆ ಎಂದು ಪ್ರಮಾಣೀಕರಿಸಲಾಗಿದೆ.

| ನೋಂದಣಿ ಸಂಖ್ಯೆ | ಶಾಲೆಯ ವಿಳಾಸ | ಈಗಾಗಲೇ ನೀಡಿರುವ ಪ್ರಾವಿಜನಲ್ ಪ್ರಮಾಣ ಪತ್ರದ ನೋಂದಣಿ ಸಂಖ್ಯೆ | ಮಾನ್ಯತೆ ನೀಡಿರುವ ಮಾಧ್ಯಮ | ಶಾಲೆ ಅನುದಾನ ರಹಿತವೇ/ ಸಹಿತವೇ | ಮಾನ್ಯತೆ ನೀಡಿರುವ ತರಗತಿಗಳು | ಮಾನ್ಯತೆ ನೀಡಿದ ವರ್ಷ | ಮಾನ್ಯತೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿದ ಅಧಿಕಾರಿಗಳ ಹೆಸರು/ಪದನಾಮ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 95/2008-09 | ಶ್ರೀ ಅನಂತನಗರ ವಿದ್ಯಾನಿಕೇತನ ಪ್ರೌಢಶಾಲೆ, ಕಮ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು -560100 | -- | ಆಂಗ್ಲ | ಅನುದಾನರಹಿತ | 08, 09 & 10 ನೇ ತರಗತಿಗಳು | 2015-16 ನೇ ಸಾಲಿನಿಂದ 2019-20 ನೇ ಸಾಲಿನವರೆಗೆ, 8,9 ಮತ್ತು 10 ನೇ ತರಗತಿಗಳ ತಲಾ ಒಂದು ವಿಭಾಗದಂತೆ ಒಟ್ಟು 03 ವಿಭಾಗಗಳಿಗೆ ಆಂಗ್ಲ ಮಾಧ್ಯಮದಲ್ಲಿ ಶಾಶ್ವತ ಅನುದಾನರಹಿತವಾಗಿ ಮಾನ್ಯತೆ ನವೀಕರಿಸಿದೆ. | ಶ್ರೀ ರಾಮಮೂರ್ತಿ.ಡಿ.ಆರ್ ಕ್ಷೇತ್ರಶಿಕ್ಷಣಾಧಿಕಾರಿಗಳು, ಆನೇಕಲ್ ತಾಲ್ಲೂಕು. |

<u>ಷರತ್ತುಗಳು:-</u>

1.ಶಿಕ್ಷಣ ಕಾಯ್ದೆಯ ಎಲ್ಲಾ ನಿಯಮಗಳನ್ನು ಸರ್ಕಾರಿ ಮತ್ತು ಇಲಾಖಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2.ನೇಮಕಾತಿಗಳನ್ನು ಸರ್ಕಾರಿ ಆದೇಶದ ಪ್ರಕಾರ ಮಾಡತಕ್ಕದ್ದು.
3.ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು, ಸರ್ಕಾರಿ ಶುಲ್ಕಗಳನ್ನು ತಪ್ಪದೇ ಜಮ ಮಾಡಿ ಚಲನ್ ನಿರ್ವಹಿಸುವುದು, ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು , ಶಾಲಾ ತನಿಖಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4.ಅವಧಿ ಮುಗಿದಿರುವ ಸ್ಥಿರನಿಧಿಯನ್ನು ನವೀಕರಿಸಿಕೊಳ್ಳಬೇಕು.
5.ಅನುದಾನ ಸಂಹಿತೆ ಪ್ರಕಾರ ಶಾಲೆಯ ಎಲ್ಲಾ ಅವಶ್ಯಕತೆಗಳನ್ನು ಆಡಳಿತ ಮಂಡಳಿಯವರು ತಕ್ಷಣ ಪೂರೈಸಬೇಕು.
6.ಇಲಾಖೆಯ ಪೂರ್ವಾನುಮತಿ ಪಡೆದು ಹೆಚ್ಚಿನ ತರಗತಿ ವಿಭಾಗಗಳನ್ನು ತೆರೆಯತಕ್ಕದ್ದು.
7.ಶಾಲಾ ಕಟ್ಟಡವನ್ನು ಬೆಂಕಿ ಹಾಗೂ ವಿದ್ಯುತ್ ಅವಘಡಗಳಿಂದ ಮುಕ್ತ ಮಾಡಲು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಅಗ್ನಿ ಶಾಮಕಗಳನ್ನು ಅಳವಡಿಸುವುದು ಮತ್ತು ಕಟ್ಟಡದ ಸುರಕ್ಷತೆಯ ಬಗ್ಗೆ ಸರ್ವೋಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ483/04, ದಿನಾಂಕ:-13-4-2009ರಲ್ಲಿ ನೀಡಿರುವ ನಿರ್ದೇಶನಗಳನ್ನು ತಪ್ಪದೆ ಪಾಲಿಸುವುದು.
8.ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಆಡಿಟ್ ರಿಪೋರ್ಟ್ ಸಲ್ಲಿಸಿ ಅನುಮೋದನೆ ಪಡೆದಿರಬೇಕು.
9.ಎಲ್.ಕೆ.ಜಿ, ಯು.ಕೆ.ಜಿ ಮಕ್ಕಳಿದ್ದಲ್ಲಿ ಅಂತಹ ಮಕ್ಕಳಿಗೆ ನೆಲಮಹಡಿಯಲ್ಲಿ ಸ್ಥಳಾವಕಾಶ ಕಲ್ಪಿಸುವುದು ಕಡ್ಡಾಯವಾಗಿದೆ
10.ಮಕ್ಕಳ ರಕ್ಷಣೆ/ಸುರಕ್ಷತೆ ಬಗ್ಗೆ ಇಲಾಖೆ ಮಾರ್ಗಸೂಚಿಯಂತೆ ಕಡ್ಡಾಯವಾಗಿ ಪಾಲಿಸಿ ಕೈಗೊಂಡಿರುವ ಕ್ರಮದ ಬಗ್ಗೆ ವರದಿ ಮಾಡಲು ತಿಳಿಸಿದೆ.
11.ಹೊಸ ಕಟ್ಟಡ ನಿರ್ಮಾಣ/ಕೊಠಡಿಗಳ ವಿಸ್ತರಣೆ/ ಕಟ್ಟಡದ ನವೀಕರಣ ಇತ್ಯಾದಿ ನಿರ್ಮಾಣ ಕೆಲಸಗಳನ್ನು ಶಾಲಾ ಅವಧಿಯ ದಿನಗಳಲ್ಲಿ ಕಡ್ಡಾಯವಾಗಿ ಕೈಗೆತ್ತಿಕೊಳ್ಳಬಾರದು.
12.ಕಟ್ಟಡದ ಬಗ್ಗೆ ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು, ಶಿಕ್ಷಣ ಕಾಯ್ದೆಯನ್ವಯ ವಿದ್ಯಾರ್ಥಿಗಳ ಸಂಖ್ಯೆ ಇರಬೇಕು ಮತ್ತು ಇಲಾಖೆಯು ನಿಗದಿಪಡಿಸಿರುವ ಪಠ್ಯ ಕ್ರಮವನ್ನು ಅನುಸರಿಸಬೇಕು ಹಾಗೂ ಬೋಧಿಸಬೇಕು, ಅಗತ್ಯವಾದ ಸ್ಥಳಾವಕಾಶ, ಪಾಠೋಪಕರಣ, ಪೀಠೋಪಕರಣ ಹಾಗೂ ಆಟದ ಮೈದಾನ ಇವುಗಳನ್ನು ಒದಗಿಸಬೇಕು.
13.ನಿಗಧಿತ ವಿದ್ಯಾರ್ಹತೆ ಮತ್ತು ತರಬೇತಿ ಹೊಂದಿದ ಶಿಕ್ಷಕರಿಂದ ಮಾತ್ರ ಬೋಧನಾ ಚಟುವಟಿಕೆಗಳು ನಡೆಸತಕ್ಕದ್ದು.
14.ಎಲ್ಲಾ ಸಿಬ್ಬಂದಿಗಳಿಗೂ ಸೇವಾ ಭದ್ರತೆ ಒದಗಿಸುವುದು ಹಾಗೂ ನಿಯಮಾನುಸಾರ ಕನಿಷ್ಠ ವೇತನ ನಿಗಧಿಪಡಿಸಿ ಬ್ಯಾಂಕ್ ಮೂಲಕ ವೇತನ ಪಾವತಿಸುವುದು , ಸೇವಾವಹಿಗಳನ್ನು ಪ್ರಾರಂಭಿಸುವುದು ಕಡ್ಡಾಯವಾಗಿರುತ್ತದೆ. ಮೇಲಿನ ಷರತ್ತುಗಳನ್ನು ಪಾಲಿಸದೇ ಇದ್ದಲ್ಲಿ ಮಾನ್ಯತೆ ರದ್ದುಪಡಿಸಲಾಗುವುದು.
15.ಸಕಾಲದಲ್ಲಿ ಮಾನ್ಯತೆ ಪ್ರಸ್ತಾವನೆ ಸಲ್ಲಿಸಿ, ಅರ್ಹ ಅವಧಿಯಲ್ಲಿಯೇ ಮಾನ್ಯತೆ ಪಡೆಯುವುದು, ಆಡಳಿತ ಮಂಡಳಿಯ ನಿರ್ಲಕ್ಷತೆಗೆ ಇಲಾಖೆ ಹೊಣೆಗಾರರಲ್ಲ.
16.ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಅಧಿನಿಯಮದ ಪ್ರಕಾರ ಮತ್ತು ನಿಯಮಾನುಸಾರ ದಾಖಲಾತಿ ಮಾಡಿಕೊಳ್ಳತಕ್ಕದ್ದು. ಕರ್ನಾಟಕ ಶಿಕ್ಷಣ ಕಾಯ್ದೆಯನ್ವಯ ಎಲ್ಲಾ ಮಾನ್ಯತೆ ನಿಯಮಗಳನ್ನು ಪಾಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನುಸಾರ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುವುದು.

(ಪದ್ಮಾವತಿ ಕೆ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರತಿಯನ್ನು :

1) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ, ಕ್ಷೇತ್ರಶಿಕ್ಷಣಾಧಿಕಾರಿಗಳು, ಆನೇಕಲ್ ತಾಲ್ಲೂಕು.
2) ಕಾರ್ಯದರ್ಶಿಗಳು, ಜಿ.ಎಸ್.ಬಿ ಚಾರಿಟೆಬಲ್ ಟ್ರಸ್ಟ್, ಕೇರಾಫ್ ಶ್ರೀ ಅನಂದನಗರ ವಿದ್ಯಾನಿಕೇತನ, ಶ್ರೀ ಅನಂತನಗರ ಮುಖ್ಯ ರಸ್ತೆ, ಕಮ್ಮಸಂದ್ರ, ಆನೇಕಲ್ ತಾ., ಬೆಂಗಳೂರು ದಕ್ಷಿಣ ಜಿಲ್ಲೆ.
3) ಮುಖ್ಯೋಪಾಧ್ಯಾಯರು, ಶ್ರೀ ಅನಂತನಗರ ವಿದ್ಯಾನಿಕೇತನ ಪ್ರೌಢಶಾಲೆ, ಕಮ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು -560100.
4) ಕಛೇರಿ ಪ್ರತಿ.

For G.S.B. CHARITABLE TRUST
Managing Trustee

PRINCIPAL
Shree Ananthnagar Vidyaniketan
# 350, 21st Cross, Shree Ananthnagar Phase-1
Huskur Gate, Kammasandra, Anekal Taluk,
Bangalore - 560 100.